# <u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ:– ಬಡತನ ರೇಖೆಗಿಂತ ಕೆಳಗೆ ಇರುವ ಕುಟುಂಬಗಳಿಗೆ ಸೇರಿದ 8ನೇ ತರಗತಿಗೆ ದಾಖಲಾಗುವ ಹೆಣ್ಣು ಮಕ್ಕಳಿಗೆ 2006–07ನೇ ಸಾಲಿನಲ್ಲಿ ಸರ್ಕಾರದ ವತಿಯಿಂದ ಉಚಿತವಾಗಿ ಬೈಸಿಕಲ್‌ಗಳನ್ನು ವಿತರಿಸುವ ಬಗ್ಗೆ

ಓದಲಾಗಿದೆ:– 1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಪತ್ರದ ಸಂಖ್ಯೆ ಯೋ(2) ಉ.ಬೈ.4/2006–07 ದಿ.10.3.2006

*********

**<u>ಪ್ರಸ್ತಾವನೆ:–</u>**

ಸನ್ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಆರ್ಥಿಕ ಸಚಿವರು ವಿಧಾನ ಮಂಡಲದಲ್ಲಿ 2006–07ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳು ದೂರದ ಹಳ್ಳಿಗಳಿಂದ ಶಾಲೆಗೆ ಬರುವಾಗ ಅನೇಕ ತೊಂದರೆಗಳನ್ನು ಅನುಭವಿಸುತ್ತಾರೆ ಎಂಬುದನ್ನು ತಿಳಿಸಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದಲ್ಲಿ 7ನೇ ತರಗತಿ ಪಾಸು ಮಾಡಿ, 8ನೇ ತರಗತಿಗೆ ದಾಖಲಾಗಿ ಕಲಿಕೆ ಮುಂದುವರೆಸುವ ಹೆಣ್ಣು ಮಕ್ಕಳಿಗೆ ಸರ್ಕಾರಿ ವೆಚ್ಚದಲ್ಲಿ ಬೈಸಿಕಲ್ ನೀಡಲು ಸರ್ಕಾರ ನಿರ್ಧರಿಸಲಾಗಿದ್ದು ಈ ಕ್ರಮದಿಂದ ಹೆಣ್ಣು ಮಕ್ಕಳು ಮನೆಯಿಂದ ಶಾಲೆಗೆ ಹೋಗಿ ಬರಲು ಆಗುವ ಅನುಕೂಲದ ಜೊತೆಗೆ ಅವರಲ್ಲಿ ಧೈರ್ಯ ಮತ್ತು ಆತ್ಮ ವಿಶ್ವಾಸ ಮೂಡಿಸಲು ಪ್ರೇರಣೆ ನೀಡುತ್ತದೆ ಎಂದು ಘೋಷಿಸಿದರು.

ಮೇಲೆ 1ರಲ್ಲಿ ಓದಲಾದ ತಮ್ಮ ಪತ್ರದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು ರಾಜ್ಯದಲ್ಲಿ ಸರ್ಕಾರಿ ಹಾಗೂ ಅನುದಾನಿತ ಪ್ರೌಢಶಾಲೆಗಳಲ್ಲಿ ಮತ್ತು 8ನೆಯ ತರಗತಿಗೆ ಉನ್ನತೀಕರಿಸಿದ ಪ್ರಾಥಮಿಕ ಶಾಲೆಗಳಲ್ಲಿ 8ನೆಯ ತರಗತಿಗೆ ದಾಖಲಾಗುವ ಬಡತನ ರೇಖೆಗಿಂತ ಕಡಿಮೆ ಇರುವ ಕುಟುಂಬಗಳಿಗೆ ಸೇರಿದ ಹೆಣ್ಣು ಮಕ್ಕಳಿಗೆ ಸರ್ಕಾರದ ವತಿಯಿಂದ ಉಚಿತವಾಗಿ ಬೈಸಿಕಲ್ ವಿತರಿಸುವ ಸಂಬಂಧ ಪ್ರಾಜೆಕ್ಟ್ ವರದಿ ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿರುವರು. ನಂತರ ಸಾರ್ವಜನಿಕ ಶಿಕ್ಷಣ ಆಯುಕ್ತರು 30.5.2006ರಂದು ಕೊನೆಯ ದಿನಾಂಕವೆಂದು ನಿಗಧಿಪಡಿಸಿ ಟೆಂಡರ್ ಅಧಿಸೂಚನೆ ಹೊರಡಿಸಿದರು. ಟೆಂಡರ್ ಅಧಿಸೂಚನೆಗೆ ಅನುಗುಣವಾಗಿ ನಿಗದಿತ ದಿನಾಂಕ 30.5.2006ರ ಒಳಗಾಗಿ ನಾಲ್ಕು ತಯಾರಿಕಾ ಸಂಸ್ಥೆಗಳು ಮಾತ್ರ ಟೆಂಡರ್ ದಸ್ತಾವೇಜುಗಳನ್ನು ಸಲ್ಲಿಸಿದ್ದವು. ದಿನಾಂಕ 1.6.2006ರಂದು ತಾಂತ್ರಿಕ ಮೌಲ್ಯಮಾಪನ ನಡೆಸಲಾಗಿ ನಾಲ್ಕು ಸಂಸ್ಥೆಗಳೂ ಅರ್ಹವಾದುವು. ದಿನಾಂಕ 5.6.2006ರಂದು ವಾಣಿಜ್ಯ/ಆರ್ಥಿಕ ಬಿಡ್‌ಗಳನ್ನು ತೆರೆಯಲಾಯಿತು. ಸಂಸ್ಥೆಗಳು ಸಲ್ಲಿಸಿದ ಬಿಡ್‌ಗಳ ಆಧಾರದ ಮೇಲೆ ಕಡಿಮೆ ದರ ನಮೂದಿಸಿದ (ಎಲ್1) ಸಂಸ್ಥೆಗಳ ವಿವರ ಈ ಕೆಳಕಂಡಂತಿತ್ತು.

ಪ್ರತಿ ಸೈಕಲಿಗೆ [ರೂಗಳಲ್ಲಿ]

| ಪ್ಯಾಕೇಜ್ | ಎಲ್1 ಆದ ಸಂಸ್ಥೆಯ ಹೆಸರು | ನಮೂದಿಸಿದ ದರ |
|---|---|---|
| 1 (ಬೆಂಗಳೂರು ವಿಭಾಗ) | ಟಿಐ ಸೈಕಲ್ಸ್ ಆಫ್ ಇಂಡಿಯಾ ಅಂಬತ್ತೂರು, ಚೆನ್ನೈ | 2115.36 |
| 2 (ಮೈಸೂರು ವಿಭಾಗ) | ಅಟ್ಲಾಸ್ ಸೈಕಲ್ಸ್ (ಹರಿಯಾಣ) ಲಿ., ಮಧ್ಯಪ್ರದೇಶ | 2115.36 |

| | | |
|---|---|---|
| 3 (ಬೆಳಗಾಂ ವಿಭಾಗ) | ಆವನ್ ಸೈಕಲ್ಸ್ ಲಿ., ಜಿಟಿರೋಡ್ ಲೂಧಿಯಾನ | 2115.36 |
| 4 (ಗುಲ್ಬರ್ಗಾ ವಿಭಾಗ) | ಹಿರೋ ಸೈಕಲ್ಸ್ ಲಿ., ಲೂಧಿಯಾನ | 2115.36 |

ಸಾರ್ವಜನಿಕ ಶಿಕ್ಷಣ ಆಯುಕ್ತರು ಪ್ರತಿ ಪ್ಯಾಕೇಜ್‌ಗೆ ಕಡಿಮೆದರ ನಮೂದಿಸಿದ್ದ ಸಂಬಂಧಿಸಿದ ಸಂಸ್ಥೆಗಳೊಡನೆ ದರ ಇಳಿಸುವ ಬಗ್ಗೆ ಎರಡು ಸಂಧಾನ ಸಭೆಗಳನ್ನು ನಡೆಸಿ ಅಂತಿಮವಾಗಿ ಪ್ರತಿ ಸೈಕಲ್‌ಗೆ ರೂ.2030 ಎಂದು ದರ ನಿಗದಿಗೊಳಿಸಿ ಸದರಿ ಟೆಂಡರ್‌ಗಳಿಗೆ ಅನುಮೋದನೆ ನೀಡಲು ಶಿಫಾರಸ್ಸು ಮಾಡಿರುತ್ತಾರೆ.

ಆಯುಕ್ತರು ಮಾಡಿದ ಶಿಫಾರಸ್ಸನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ ಇಡಿ 93 ಯೋಯೋಕಾ 2006 ಬೆಂಗಳೂರು ದಿನಾಂಕ 14ನೇ ಜುಲೈ2006**
**ಇಡಿ 70 ಸ್ಕೀಮರ (ಯುನಿಕ್) ಬೆಂಗಳೂರು ದಿನಾಂಕ 14.7.2006**

2006–07ನೇ ಸಾಲಿನಲ್ಲಿ ರಾಜ್ಯದ ಸರಕಾರಿ 8ನೆಯ ತರಗತಿ ಸೇರಿಸಿ ಉನ್ನತೀಕರಿಸಿದ ಪ್ರಾಥಮಿಕ ಶಾಲೆಗಳಲ್ಲಿ ಮತ್ತು ಸರ್ಕಾರಿ ಹಾಗೂ ಅನುದಾನಿತ ಪ್ರೌಢಶಾಲೆಗಳಲ್ಲಿ 8ನೆಯ ತರಗತಿಗೆ ದಾಖಲಾಗುವ ಬಡತನ ರೇಖೆಗಿಂತ ಕೆಳಗೆ ಇರುವ ಕುಟುಂಬಗಳಿಗೆ ಸೇರಿದ ಹೆಣ್ಣು ಮಕ್ಕಳಿಗೆ ಉಚಿತವಾಗಿ ಬೈಸಿಕಲ್ ನೀಡುವ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಪ್ರಸ್ತಾವನೆಗೆ ಸರ್ಕಾರದ ಅನುಮೋದನೆ ನೀಡಿದೆ.

ಬೈಸಿಕಲ್‌ಗಳನ್ನು ಪ್ಯಾಕೇಜ್‌ವಾರು ಕಡಿಮೆ ದರ ನಮೂದಿಸಿರುವ ಕೆಳಕಂಡ ಸಂಸ್ಥೆಗಳಿಂದ ಖರೀದಿಸಲು ಸರ್ಕಾರ ಒಪ್ಪಿಗೆ ನೀಡಿದೆ.

| **ಪ್ಯಾಕೇಜ್** | **ಸಂಸ್ಥೆಯ ಹೆಸರು** |
|---|---|
| 1 (ಬೆಂಗಳೂರು ವಿಭಾಗ) | ಟಿಐ ಸೈಕಲ್ಸ್ ಆಫ್ ಇಂಡಿಯಾ ಅಂಬತ್ತೂರು, ಚೆನ್ನೈ |
| 2 (ಮೈಸೂರು ವಿಭಾಗ) | ಅಟ್ಲಾಸ್ ಸೈಕಲ್ಸ್ (ಹರಿಯಾಣ) ಲಿ., ಮಧ್ಯಪ್ರದೇಶ |
| 3 (ಬೆಳಗಾಂ ವಿಭಾಗ) | ಆವನ್ ಸೈಕಲ್ಸ್ ಲಿ., ಜಿಟಿರೋಡ್ ಲೂಧಿಯಾನ |
| 4 (ಗುಲ್ಬರ್ಗಾ ವಿಭಾಗ) | ಹಿರೋ ಸೈಕಲ್ಸ್ ಲಿ., ಲೂಧಿಯಾನ |

ಪ್ರತಿ ಬೈಸಿಕಲ್‌ನ ದರ ಫಿಟ್ಟಿಂಗ್ ಹಾಗೂ ಎಲ್ಲಾ ಸಾಗಾಣಿಕೆ ದರ ಮತ್ತು ಎಲ್ಲಾ ತೆರಿಗೆಗಳು ಸೇರಿ ರೂ.2030.00(ಎರಡುಸಾವಿರದಮೂವತ್ತುಮಾತ್ರ) ಮೀರಬಾರದು. ಬೈಸಿಕಲ್‌ಗಳನ್ನು ಸಂಬಂಧಿಸಿದ ಸಂಸ್ಥೆಗಳು ಆರಿಸಿದ ಎಲ್ಲಾ ಶಾಲೆಗಳವರೆಗೆ ಸರಬರಾಜು ಮಾಡತಕ್ಕದ್ದು. ಸರಬರಾಜು ಮಾಡಲು ಆದೇಶ ನೀಡುವ ಬೈಸಿಕಲ್‌ಗಳ ಒಟ್ಟು ಸಂಖ್ಯೆ ಎರಡು ಲಕ್ಷ ಅಥವಾ ಅರ್ಹ ಫಲಾನುಭವಿಗಳ ಸಂಖ್ಯೆ ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟಕ್ಕೆ ಸೀಮಿತವಾಗಿರತಕ್ಕದ್ದು. ಬೈಸಿಕಲ್‌ಗಳು ಸ್ಟಾಂಡರ್ಡ್ ಆಕ್ಸಸರೀಸ್ ಅಂದರೆ ಬೆಲ್, ಬೀಗ, ಪೂರ್ತಿ ಸ್ಟಾಂಡ್, ಕ್ಯಾರಿಯರ್, ಪೂರ್ಣಗೇರ್‌ಕೇಸ್ ಹಾಗೂ ಫ್ರಂಟ್ ಬ್ಯಾಸ್ಕೆಟ್ ಇತ್ಯಾದಿಗಳನ್ನು ಒಳಗೊಂಡಿರಬೇಕು.

ಸಂಬಂಧಿಸಿದ ಸಂಸ್ಥೆಗಳಿಗೆ ಸರಬರಾಜು ಆದೇಶ ನೀಡುವಾಗ ಅರ್ಹ ಫಲಾನುಭವಿಗಳ ವಿವರಗಳನ್ನು ಖಚಿತಪಡಿಸಿಕೊಳ್ಳಲು ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರಿಗೆ ಸೂಚಿಸಿದೆ.

ವಸತಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮತ್ತು ಸರ್ಕಾರವು ನಡೆಸುತ್ತಿರುವ ವಸತಿ ನಿಲಯಗಳಲ್ಲಿ ದಾಖಲಾಗಿರುವ ಹೆಣ್ಣು ಮಕ್ಕಳು ಈ ಯೋಜನೆಯಡಿಯ ಲಾಭ ಪಡೆಯಲು ಅರ್ಹರಾಗುವುದಿಲ್ಲ.

ಸರ್ಕಾರಿ ಸೌಮ್ಯದ ಸಾರಿಗೆ ಸಂಸ್ಥೆಗಳಿಂದ ರಿಯಾಯ್ತಿ ಬಸ್ ಪಾಸ್ ಹೊಂದಿರುವ ಹೆಣ್ಣು ಮಕ್ಕಳು ಈ ಎರಡರಲ್ಲಿ ಒಂದನ್ನು ಆರಿಸಿ ಕೊಳ್ಳಬೇಕು.

ಸರಬರಾಜಾಗುವ ಬೈಸಿಕಲ್‌ಗಳ ಗುಣಮಟ್ಟವನ್ನು ಐಎಸ್ 10613–2004 ಸ್ಟಾಂಡರ್ಡ್ ಗುಣಮಟ್ಟಕ್ಕೆ ಹೊಂದಿರುವುದನ್ನು ದೃಢಪಡಿಸಿಕೊಳ್ಳತಕ್ಕದ್ದು. ಬೈಸಿಕಲ್‌ಗಳ ಸಕಾಲಿಕ ಮತ್ತು ಸಮರ್ಪಕ ಸರಬರಾಜಿನ ಬಗ್ಗೆ ಸಂಬಂಧಿಸಿದ ಸಂಸ್ಥೆಗಳೊಡನೆ ಸೂಕ್ತ ಕರಾರನ್ನು ಮಾಡಿಕೊಳ್ಳಲು ಸಾರ್ವಜನಿಕ ಶಿಕ್ಷಣ ಆಯುಕ್ತರಿಗೆ ಸೂಚಿಸಿದೆ. ಕರಾರು ಮಾಡಿಕೊಳ್ಳುವಾಗ ನಿಧಾನ ಸರಬರಾಜಿಗೆ ಮತ್ತು ಕಳಪೆ ಗುಣಮಟ್ಟಕ್ಕೆ ಸಂಬಂಧಿಸಿದಂತೆ ದಂಡ ವಿಧಿಸುವ ಅಂಶಗಳನ್ನೂ ನಿಗಧಿ ಗೊಳಿಸತಕ್ಕದ್ದು.

ಬೈಸಿಕಲ್‌ಗಳನ್ನು ಬೇಜವಾಬ್ದಾರಿಯಿಂದ ಉಪಯೋಗಿಸುವುದಾಗಲೀ ಅಥವಾ ಮಾರಾಟ ಮಾಡುವುದಾಗಲೀ ಕಂಡು ಬಂದಲ್ಲಿ ಫಲಾನುಭವಿಗಳಿಂದ ಸೈಕಲಿನ ದರವನ್ನು ವಸೂಲು ಮಾಡಬೇಕು.

ಸೈಕಲ್‌ಗಳ ದುರುಪಯೋಗವನ್ನು ತಡೆಯುವ ಸಲುವಾಗಿ ಬೈಸಿಕಲ್‌ಗಳಿಗೆ ನಿಗಧಿತ ಸಂಖ್ಯೆ ಯನ್ನು ನಮೂದಿಸಬೇಕು.

ಪ್ರತಿ ಬೈಸಿಕಲ್‌ನ ಮೇಲೆ "ಸುವರ್ಣ ಕರ್ನಾಟಕ" ಮತ್ತು "ಹೆಣ್ಣೊಂದು ಕಲಿತರೆ ಶಾಲೆ ಯೊಂದು ತೆರೆದಂತೆ" ಎಂಬ ಲೋಗೋವನ್ನು ನಮೂದಿಸಬೇಕು.

ರಾಜ್ಯ ಮಟ್ಟದಲ್ಲಿ ಸಾರ್ವಜನಿಕ ಶಿಕ್ಷಣ ಆಯುಕ್ತರು, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಖರೀದಿ ಮತ್ತು ಗುಣಮಟ್ಟದ ಸಮಿತಿಯನ್ನು ರಚಿಸಿದೆ. ಈ ಕೆಳಕಂಡ ಅಧಿಕಾರಿಗಳು ಸಮಿತಿಯ ಸದಸ್ಯರಾಗಿರುತ್ತಾರೆ.

| | | |
|---|---|---|
| 1. | ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಅಧ್ಯಕ್ಷರು |
| 2. | ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು | ಸದಸ್ಯರು |
| 3. | ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ | ಸದಸ್ಯರು |
| 4. | ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ | ಸದಸ್ಯರು |
| 5. | ನಿರ್ದೇಶಕರು, ಪ್ರೌಢ ಶಿಕ್ಷಣ, ಬೆಂಗಳೂರು | ಸದಸ್ಯರು |
| 6. | ಆಯುಕ್ತರು, ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ಯ ಇಲಾಖೆ | ಸದಸ್ಯರು |
| 7. | ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ | ಸದಸ್ಯರು |
| 8. | ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಬೆಂಗಳೂರು | ಸದಸ್ಯ ಕಾರ್ಯದರ್ಶಿ |

**ಸಮಿತಿಯ ಜವಾಬ್ದಾರಿಗಳು**

1. ಸಮಿತಿಯ ಕರ್ನಾಟಕ ಪಾರದರ್ಶಕ ಟೆಂಡರ್ ಕಾಯಿದೆ 1998 ಹಾಗು ನಿಯಮ 2000ರ ಅನ್ವಯ ಬೈಸಿಕಲ್‌ಗಳನ್ನು ಕೇಂದ್ರಿಕೃತವಾಗಿ ಖರೀದಿಸಬೇಕು.
2. ಸಮಿತಿಯು ಬೈಸಿಕಲ್‌ಗಳನ್ನು ವ್ಯವಸ್ಥಿತವಾಗಿ ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಮೇಲುಸ್ತುವಾರಿಯಲ್ಲಿ ಬೈಸಿಕಲ್ ಸರಬರಾಜುದಾರರು ಫಲಾನುಭವಿಗಳಿಗೆ ತಲುಪುವಂತೆ ನಿಗಾ ವಹಿಸಬೇಕು.
3. ರಾಜ್ಯ ಮಟ್ಟದಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರು ಶಾಲಾ ಹಂತದಲ್ಲಿ ವಿತರಣೆಯಾದ ಬೈಸಿಕಲ್‌ಗಳ ಮಾಹಿತಿ ಆಧಾರದ ಮೇಲೆ ಬೈಸಿಕಲ್ ಸರಬರಾಜುದಾರರಿಗೆ ಹಣ ಪಾವತಿಸುವುದು.

ಜಿಲ್ಲಾ ಹಂತದಲ್ಲಿ ಈ ಕೆಳಕಂಡ ಅಧಿಕಾರಿಗಳ ಸಮಿತಿಯನ್ನು ರಚಿಸಿ ಜಿಲ್ಲೆಯಲ್ಲಿ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಬೇಕು. ಈ ಸಮಿತಿಯಲ್ಲಿ ಇರುವ ಸದಸ್ಯರು.

| | | |
|---|---|---|
| 1. | ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯತ್ | ಅಧ್ಯಕ್ಷರು |
| 2. | ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ | ನೋಡಲ್ ಅಧಿಕಾರಿ |
| 3. | ಜಿಲ್ಲಾ ಖಜಾನಾಧಿಕಾರಿಗಳು | ಸದಸ್ಯರು |
| 4. | ವ್ಯವಸ್ಥಾಪಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ | ಸದಸ್ಯರು |
| 5. | ಬೈಸಿಕಲ್ ಪೂರೈಸುವ ಸಂಸ್ಥೆಯ ಒಬ್ಬರು ಪ್ರತಿನಿಧಿ | ಸದಸ್ಯರು |
| 6. | ಜಿಲ್ಲಾ ಅಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆ | ಸದಸ್ಯರು |

**ಸಮಿತಿಯ ಜವಾಬ್ದಾರಿಗಳು**

1. ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಉಪನಿರ್ದೇಶಕರು, ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿಯಾಗಿ, ಕ್ಷೇತ್ರ ಶಿಕ್ಷಣಾ ಅಧಿಕಾರಿಗಳನ್ನು ತಾಲ್ಲೂಕು ಮಟ್ಟದ ನೋಡಲ್ ಅಧಿಕಾರಿಯಾಗಿ, ನಾಮ ನಿರ್ದೇಶಿಸಿ ನೋಡಲ್ ಅಧಿಕಾರಿಗಳು ಶಾಲಾ ಮಟ್ಟದಲ್ಲಿ ಕ್ರಮ ಬದ್ಧವಾಗಿ ವಿತರಣೆ ಮಾಡುವ ಬಗ್ಗೆ ಮೇಲ್ವಿಚಾರಣೆ ಮಾಡಬೇಕು.
2. ಇದಕ್ಕೆ ಸಂಬಂಧಪಟ್ಟ ದಾಸ್ತಾನು ವಹಿಯನ್ನು ನಿರ್ವಹಿಸಿ ಸ್ವೀಕೃತಿಗಳೊಂದಿಗೆ ಜಿಲ್ಲಾ ಕಾರ್ಯನಿರ್ವಹಣಾಧಿಕಾರಿಗಳಿಗೆ ವಿತರಣಾ ಕಾರ್ಯ ಮುಗಿದ ನಂತರ ಸಲ್ಲಿಸಬೇಕು.
3. ಜಿಲ್ಲಾ ಸಮಿತಿಯು ವಿತರಣೆಯ ಸಮಯದಲ್ಲಿ ಪ್ರತಿ ವಾರಕ್ಕೆ ಒಮ್ಮೆ ಸಭೆಯನ್ನು ನಡೆಸಿ ಬೈಸಿಕಲ್‌ಗಳು ಸಮರ್ಪಕವಾಗಿ ವಿತರಣೆಯಾಗುವಲ್ಲಿ ಉಂಟಾಗಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಿ, ಸಭೆಯ ನಡಾವಳಿಗಳನ್ನು ದಾಖಲಿಸಿ ಸೂಕ್ತ ಕ್ರಮವನ್ನು ತ್ವರಿತವಾಗಿ ತೆಗೆದು ಕೊಳ್ಳುವುದು.

**ತಾಂತ್ರಿಕ ಸಮಿತಿ**

ಈ ಸಮಿತಿಯು ಪೂರೈಸುವ ಬೈಸಿಕಲ್‌ಗಳ ಗುಣಮಟ್ಟವನ್ನು ಪರೀಕ್ಷಿಸಿ ಉತ್ತಮ ಗುಣಮಟ್ಟವನ್ನು ದೃಢೀಕರಿಸಬೇಕು. ಈ ಸಮಿತಿಯಲ್ಲಿ ಕೆಳಕಂಡ ಅಧಿಕಾರಿಗಳು ಸದಸ್ಯ ರಾಗಿರುತ್ತಾರೆ.

| | | |
|---|---|---|
| 1. | ನಿರ್ದೇಶಕರು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ | ಸದಸ್ಯರು |
| 2. | ಮೆಟಲರ್ಜಿ ವಿಭಾಗದ ಒಬ್ಬರು ವಿಜ್ಞಾನಿಗಳು (ಐಐಎಸ್‌ಸಿ) ಬೆಂಗಳೂರು | ಸದಸ್ಯರು |
| 3. | ರಸಾಯನಿಕ ವಿಭಾಗದ ವಿಜ್ಞಾನಿಗಳು (ಐಐಎಸ್‌ಸಿ) ಬೆಂಗಳೂರು | ಸದಸ್ಯರು |
| 4. | ವಿಶ್ವೇಶ್ವರಯ್ಯ ತಾಂತ್ರಿಕ ಇಂಜಿನಿಯರಿಂಗ್ ಕಾಲೇಜಿನ ಒಬ್ಬರು ಮುಖ್ಯಸ್ಥರು | ಸದಸ್ಯರು |

ಈ ತಾಂತ್ರಿಕ ಸಮಿತಿಯು ಪೂರೈಸಲಾಗುವ ಬೈಸಿಕಲ್‌ನ ಗುಣಮಟ್ಟವು ಸ್ಟಾಂಡರ್ಡ್ ಗುಣಮಟ್ಟಕ್ಕೆ ಹೊಂದಿದೆಯೇ ಎಂಬುದನ್ನು ದೃಢೀಕರಿಸಿಕೊಳ್ಳಬೇಕು. ಈ ಸಮಿತಿಯು ಬೈಸಿಕಲ್‌ನ್ನು ಪರೀಕ್ಷೆ ಮಾಡುವ ವಿಷಯದ ಬಗ್ಗೆ ಪರಿಣಿತಿ ಹೊಂದಲು ಬೈಸಿಕಲ್‌ನ್ನು ಪರೀಕ್ಷಿಸುವ ತರಬೇತಿಗಾಗಿ ಪಂಜಾಬ್ ರಾಜ್ಯದಲ್ಲಿರುವ ಬೈಸಿಕಲ್ ಸಂಶೋದನಾ ಹಾಗೂ ಅಭಿವೃದ್ಧಿ ಕೇಂದ್ರ ಲೂದಿಯಾನ ಇಲ್ಲಿ ತರಬೇತಿಯನ್ನು ಪಡೆದು, ಜಿಲ್ಲಾ ಸಮಿತಿ ಸದಸ್ಯರಿಗೆ ಒಂದು ದಿನದ ಬೈಸಿಕಲ್ ಪರೀಕ್ಷಿಸುವ ತರಬೇತಿಯನ್ನು ನೀಡಬೇಕಾಗುತ್ತದೆ.

ಬೈಸಿಕಲ್‌ಗಳನ್ನು ಖರೀದಿಸಿ ಅವುಗಳ ವೆಚ್ಚ ಭರಿಸಲು ಆಯವ್ಯಯ ಶೀರ್ಷಿಕೆ ನಿಗದಿಪಡಿಸಿ ಪ್ರತ್ಯೇಕ ಆದೇಶವನ್ನು ಶೀಘ್ರದಲ್ಲಿ ಹೊರಡಿಸಲಾಗುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅ.ಟಿ.ಸಂಖ್ಯೆಆಇ:467:ವೆಚ್ಚ-82006 ದಿನಾಂಕ:4.5.2006ರಲ್ಲಿ ಹಾಗೂ ಯೋಜನೆ ಇಲಾಖೆಯ ಅ.ಟಿಸಂಖ್ಯೆ ಯೋಇ: 30 : ಜಶ 2006 ದಿ.20.4.2006 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ

**(ಸಹಿ)**

**(ಕೆ.ಶ್ರೀಕಂಠೇಶ್ವರ)**

ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಸಹ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಯೋಜನೆ)

**ಗೆ :**

1. ಮಹಾಲೇಖಪಾಲರು, ಕರ್ನಾಟಕ (ಆಡಿಟ್ 1 ಮತ್ತು 2), ಬೆಂಗಳೂರು
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ, ಗುಲ್ಬರ್ಗ
4. ಆಯುಕ್ತರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು
5. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು
6. ನಿರ್ದೇಶಕರು (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
7. ನಿರ್ದೇಶಕರು, ಖಜಾನಾ ನಿರ್ದೇಶನಾಲಯ, ಬೆಂಗಳೂರು
8. ನಿರ್ದೇಶಕರು, ರಾಜ್ಯ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು
9. ನಿರ್ದೇಶಕರು, ಯೋಜನಾ ಇಲಾಖೆ, ಪಿಎಂಐ ವಿಭಾಗ, ಬೆಂಗಳೂರು
10. ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು
11. ಉಪ ನಿರ್ದೇಶಕರು, (ಯೋಜನೆ) ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
12. ಉಪಕಾರ್ಯದರ್ಶಿ-2, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
13. ಸರ್ಕಾರದ ಕಾರ್ಯದರ್ಶಿ, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರವರ ಆಪ್ತ ಕಾರ್ಯದರ್ಶಿ ಇವರ ಮಾಹಿತಿಗಾಗಿ
14. ರಾಜ್ಯ ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು
15. ಉಪನಿರ್ದೇಶಕರು, ಖಜಾನಾ ಗಣಕ ಕೇಂದ್ರ, ನಂ.49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು
16. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
17. ಮಾನ್ಯ ಉಪಮುಖ್ಯ ಮಂತ್ರಿಯವರ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
18. ಸಾಪ್ತಾಹಿಕ ರಾಜ್ಯ ಪತ್ರ
19. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು